ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನವನ್ನು ಭೋಧಿಸಲಾದ ದಿನಾಂಕಃ 27.07.2026

ಪಾಟೀ ಸವಾಲು ಃ ಪ್ರತಿವಾದಿಗಳ ಪರ ಶ್ರೀ. ಬಿ.ಕೆ. ವಕೀಲರಿಂದ

1. ವಾದಿಯು ನನ್ನ ಖಾಸಾ ತಂದೆ ಎಂದರೆ ಸರಿ. ನನಗೆ ಪ್ರತಿವಾದಿಗಳ ಕುಟುಂಬದ ಬಗ್ಗೆ ಸಂಪೂರ್ಣ ಮಾಹಿತಿ ಇದೆ ಎಂದರೆ ಸರಿ. 1 ನೇ ಪ್ರತಿವಾದಿಗೆ ಒಬ್ಬ ಗಂಡು ಮಗ, ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ. ಸಾಕ್ಷಿ ಮುಂದುವರೆದು ಕ್ರಯದ ಕರಾರು ಪತ್ರದ ಸಮಯದಲ್ಲಿ ಪ್ರತಿವಾದಿಗಳು ತಮ್ಮ ಹೆಣ್ಣು ಮಕ್ಕಳಿಗೆ ಕೊಡಬೇಕಾಗದ ಭಾಗಾಂಶ ಕೊಟ್ಟಿದ್ದೇವೆ ಎಂದು ತಿಳಿಸಿದ್ದರು ಎಂದು ನುಡಿಯುತ್ತಾರೆ. ಕರಾರು ಪತ್ರವನ್ನು ದಿನಾಂಕ 11.11.2020 ರಂದು ಬರೆದುಕೊಟ್ಟಿರುತ್ತಾರೆ. ನಾನು ನಿ ಪಿ 1 ಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿರುವ ದೇವರಾಜು ರವರ ಮುಖಾಂತರ ಆಸ್ತಿ ಖರೀದಿಸಲು ಮಾತುಕತೆ ನಡೆಸಿರುತ್ತೇನೆ ಎಂದರೆ ಸರಿಯಲ್ಲ. ಪತ್ರವನ್ನು ಶಂಕರ್‌ನಾಗ್ ಎಂಬುವವರು ಬರೆದಿರುತ್ತಾರೆ. ನಮಗೆ ಪ್ರತಿವಾದಿಗಳು ಕ್ರಯದ ಕರಾರು ಪತ್ರವನ್ನು ಬರೆದುಕೊಡುವ ಮುಂಚೆ ಸಾಕ್ಷಿದಾರರಾದ ದೇವರಾಜುರವರಿಗೆ ದಿನಾಂಕ 05.02.2015 ರಂದು ರೂ. 6,20,000/- ರೂಪಾಯಿಗಳಿಗೆ ವ್ಯಾಪಾರ ಮಾಡಿ 2,00,000/- ರೂಪಾಯಿಗಳನ್ನು ಮುಂಗಡ ಹಣವಾಗಿ ಪಡೆದು ಕ್ರಯದ ಕರಾರು ಬರೆದುಕೊಟ್ಟಿದ್ದ ಸಂಗತಿಯು ನನಗೆ ತಿಳಿದಿತ್ತು ಎಂದರೆ ಸರಿಯಲ್ಲ. ಸದರಿ ಪತ್ರವನ್ನು ಸಹ ಶಂಕರ್‌ನಾಗ್ ಎಂಬುವರೆ ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪತ್ರಕ್ಕೆ 1 ನೇ ಪ್ರತಿವಾದಿಯ ಇಬ್ಬರು ಹೆಣ್ಣುಮಕ್ಕಳಾದ ವೀಣಾ ಎಂ ಮತ್ತು ಧನಲಕ್ಷ್ಮೀ ಎಂ ಎಂಬುವವರು ಸಹ ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

2. ಸಾಕ್ಷಿದಾರರಾದ ದೇವರಾಜು ಎಂಬುವವರು ನನ್ನ ಆತ್ಮೀಯ ಸ್ನೇಹಿತರು ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನಾನು ಸಾಕ್ಷಿದಾರರಾದ ದೇವರಾಜುರವರ ಮುಖಾಂತರವೆ ಕ್ರಯದ ಕರಾರು ಪತ್ರ ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳನ್ನು ಮೋಸದಿಂದ ಸಾಕ್ಷಿದಾರರಾದ ದೇವರಾಜುರವರು ನೋಂದಣಿ ಕಛೇರಿಗೆ ಕ್ರಯಪತ್ರ ಬರೆಸಿಕೊಳ್ಳುತ್ತೇನೆ ಎಂದು ಕರೆಯಿಸಿ ನಮಗೆ ಕ್ರಯದ ಕರಾರು ಪತ್ರವನ್ನು ಬರೆಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

3. ನಾನು ಬಿ.ಕಾಂ ಪಧವಿ ವ್ಯಾಸಂಗ ಮಾಡಿರುತ್ತೇನೆ. ಯಾವುದೇ ವ್ಯವಹಾರವನ್ನು ಎರಡು ಲಕ್ಷ ರೂಪಾಯಿಗಳಿಗಿಂತ ಜಾಸ್ತಿ ಮಾಡಿದರೆ ಹಣವನ್ನು ಚೆಕ್ ಮುಖಾಂತರ ಅವರ ಖಾತೆಗೆ ಜಮಾ ಮಾಡಬೇಕು ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಪ್ರತಿವಾದಿಗಳಿಗೆ ಯಾವುದೇ ರೀತಿಯ ಕ್ರಯದ ಕರಾರು ಪತ್ರದ ಬಾಬ್ತು ಐದು ಲಕ್ಷ ರೂಪಾಯಿ ಹಣವನ್ನು ಸಂದಾಯ ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರಾದ ದೇವರಾಜುರವರು ಎರಡು ಲಕ್ಷ ರೂಪಾಯಿ ಹಣವನ್ನು ಪ್ರತಿವಾದಿಗಳಿಗೆ ಪಾವತಿ ಮಾಡಿರುವುದನ್ನು ಬಿಟ್ಟು ನಾನಾಗಲೀ, ನನ್ನ ತಂದೆಯಾಗಲೀ ಪ್ರತಿವಾದಿಗಳಿಗೆ ಐದು ಲಕ್ಷ ರೂಪಾಯಿ ಹಣ ಪಾವತಿ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ ಸಂಬಂಧಪಟ್ಟ ಉಳಿತಾಯ ಖಾತೆ ಬ್ಯಾಂಕ್‌ನಲ್ಲಿ ಇದೆ ಮತ್ತು ಅದಕ್ಕೆ ಸಂಂಬಂಧಪಟ್ಟಂತೆ ಚೆಕ್ ಪುಸ್ತಕ ಸಹ ಇದೆ. ಒಂದು ವೇಳೆ ಪ್ರತಿವಾದಿಗಳಿಗೆ ಹಣ ನೀಡಿದ್ದರೆ ಚೆಕ್ ಮುಖಾಂತರ ನೀಡುತ್ತಿದ್ದೆ ಆ ಕಾರಣದಿಂದ ಪ್ರತಿವಾದಿಗಳಿಗೆ ನಾನು ಹಣವನ್ನೇ ನೀಡಿಲ್ಲ ಎಂದರೆ ಸರಿಯಲ್ಲ. ನೋಂದಣಿ ಕಛೇರಿಯಿಂದ 500 ಮೀ. ದೂರವಿರುವ

ಒಂದು ಟೀ ಕ್ಯಾಂಟೀನ್ ನಲ್ಲಿ ಕುಳಿತು ಪ್ರತಿವಾದಿಗಳಿಗೆ ಹಣ ಪಾವತಿ ಮಾಡಿರುತ್ತೇವೆ. ಅದರ ಮಾಲೀಕರು ಯಾರು ಎಂದು ನನಗೆ ಗೊತ್ತಿಲ್ಲ. ಅವರು ಯಾರೂ ಸಹ ಪತ್ರಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿರುವುದಿಲ್ಲ. ಪ್ರತಿವಾದಿಗಳಿಗೆ 500 ರೂ ಮತ್ತು 100 ಮುಖಬೆಲೆಯ ನೋಟುಗಳನ್ನು ನೀಡಿರುತ್ತೇವೆ. ಅವುಗಳ ಎಷ್ಟು ನೋಟುಗಳನ್ನು ನೀಡಿರುತ್ತೇವೆ ಎಂದು ನನಗೆ ಈಗ ಹೇಳಲು ಆಗುವುದಿಲ್ಲ. ನಾನು ಕ್ರಯದ ಕರಾರು ಪತ್ರದ ಬಾಬ್ತು ಯಾವುದೇ ಹಣವನ್ನು ಪ್ರತಿವಾದಿಗಳಿಗೆ ನೀಡಿಲ್ಲ ಎಂದರೆ ಸರಿಯಲ್ಲ. ಕ್ರಯದ ಕರಾರು ಪತ್ರದಲ್ಲಿ ಟೀ ಕ್ಯಾಂಟೀನ್ ನಲ್ಲಿ ಹಣ ನೀಡಲಾಗಿದೆ ಎಂದು ಬರೆಸಿಲ್ಲ ಎಂದರೆ ಸರಿ. ನಾವೇನಾದರೂ ಕಾನೂನು ಬದ್ಧವಾಗಿ ಕ್ರಯದ ಕರಾರು ಪತ್ರವನ್ನು ಬರೆಸಿಕೊಂಡಿದ್ದರೆ 1 ನೇ ಪ್ರತಿವಾದಿಯ ಹೆಣ್ಣು ಮಕ್ಕಳನ್ನು ಸಹ ಕರೆದು ಕ್ರಯದ ಕರಾರು ಪತ್ರಕ್ಕೆ ಸಹಿ ಮಾಡಿಸಿಕೊಳ್ಳುತ್ತಿದ್ದೆವು ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ನಾನಾಗಲೀ, ಸಾಕ್ಷಿದಾರರಾದ ದೇವರಾಜುರವರಾಗಲೀ ಹಣ ಪಾವತಿ ಮಾಡಿಲ್ಲ ಎಂದರೆ ಸಾಕ್ಷಿಯು ನಾವು ಪಾವತಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಕಾನೂನು ಬಾಹಿರವಾಗಿ ಕ್ರಯಪತ್ರವನ್ನು ಸೃಷ್ಠಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಹಣ ನೀಡುವ ಸಮಯದಲ್ಲಿ ನೋಂದಣಾಧಿಕಾರಿಗಳು ಮತ್ತು ಪತ್ರ ಬರಹಗಾರರು ಇರಲಿಲ್ಲ. ಸಾಕ್ಷಿದಾರರಾದ ದೇವರಾಜುರವರ ಮಾತು ಕೇಳಿ ಕ್ರಯದ ಕರಾರು ಪತ್ರವನ್ನು ಸೃಷ್ಠಿಸಿಕೊಂಡು ಪ್ರತಿವಾದಿಗಳ ಆಸ್ತಿಯನ್ನು ಲಪಟಾಯಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಮೋಸ ಮಾಡಲು ನಾನು ಮತ್ತು ದೇವರಾಜು ಇಬ್ಬರೂ ಮಾತ್ರವೇ ಸಾಕ್ಷಿದಾರರಾಗಿ ಪತ್ರಕ್ಕೆ ಸಹಿ ಮಾಡಿರುತ್ತೇವೆ

ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಕ್ರಯದ ಕರಾರು ಬಾಬ್ತು ಯಾವುದೇ ಹಣ ಸಂದಾಯ ಆಗದೇ ಇರುವ ಕಾರಣ ನಾನು ಮತ್ತು ವಾದಿಯು ಯಾವುದೇ ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯಾದ ನನ್ನ ತಂದೆಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

(ದೇವರಾಜು ಹೆಚ್.ಆರ್.)
C/C 1ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.